ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 23–3–2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಪತ್ರಿಕಾಗೋಷ್ಠಿ:<br>ಶ್ರೀಮತಿ ಜಲಜಾನಾಯ್ಕ,<br>ಅಧ್ಯಕ್ಷರು,<br>ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ | 24–3–2015<br>ಮಂಗಳವಾರ<br>ಬೆಳಗ್ಗೆ<br>10–00 ಗಂಟೆಗೆ | ಕೆ.ಎ.ಎಸ್. ಅಧಿಕಾರಿಗಳ ಅಸೋಷಿಯೇಷನ್ ಸಭಾಂಗಣ,<br>ಇನ್‌ಫೆಂಟ್ರಿ ರಸ್ತೆ,<br>ಬೆಂಗಳೂರು –560 001 |
| 2 | ಕ್ಷಯರೋಗ ಶೀಘ್ರ ಪತ್ತೆ ಹಚ್ಚುವ ಯಂತ್ರ ಉದ್ಘಾಟನೆ:<br><br>ಉದ್ಘಾಟಕರು:<br><br>ಶ್ರೀ ಯು.ಟಿ. ಖಾದರ್<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು | 24–3–2015<br>ಮಂಗಳವಾರ<br>ಬೆಳಗ್ಗೆ<br>10–00 ಗಂಟೆಗೆ | ಬೋರಿಂಗ್ ಅಂಡ್ ಲೇಡಿ ಕರ್ಜನ್ ಆಸ್ಪತ್ರೆ,<br>ಶಿವಾಜಿನಗರ,<br>ಬೆಂಗಳೂರು |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## ವಿಜೃಂಭಣೆಯಿಂದ ದೇವರಾಜು ಅರಸು ಶತಮಾನೋತ್ಸವ ಆಚರಣೆ

ಬೆಂಗಳೂರು, ಮಾರ್ಚ್ 23 (ಕರ್ನಾಟಕ ವಾರ್ತೆ)

ಸಾಮಾಜಿಕ ನ್ಯಾಯ ಹಾಗೂ ಬಡವರ ಬಗ್ಗೆ ಕಾಳಜಿಯನ್ನು ಹೊಂದಿದ್ದ ದಿವಂಗತ ಡಿ. ದೇವರಾಜ ಅರಸು ಅವರು ಜನ್ಮತಾಳಿ ಆಗಸ್ಟ್ 20 ಕ್ಕೆ 100 ವರ್ಷಗಳಾಗುತ್ತಿರುವ ಹಿನ್ನೆಲೆಯಲ್ಲಿ ಅವರ ಶತಮಾನೋತ್ಸವವನ್ನು ಸರ್ಕಾರವು ವಿಜೃಂಬಣೆಯಿಂದ ಆಚರಿಸಲು ನಿರ್ಧರಿಸಿದೆ ಎಂದು ಸಮಾಜ ಕಲ್ಯಾಣ ಸಚಿವ ಹೆಚ್. ಆಂಜನೇಯ ತಿಳಿಸಿದರು.

ವಿಧಾನ ಪರಿಷತ್ತಿನ ಸದಸ್ಯ ಎಂ.ಡಿ. ಲಕ್ಷ್ಮೀನಾರಾಯಣ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು 5 ಕೋಟಿ ರೂ. ವೆಚ್ಚದಲ್ಲಿ ದೇವರಾಜ ಅರಸು ಜನ್ಮಶತಮಾನೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸುವ ಸಲುವಾಗಿ ಅವರ ಅನುಯಾಯಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಿ ಕಾರ್ಯಕ್ರಮದ ರೂಪುರೇಷೆಯನ್ನು ಸಿದ್ದಪಡಿಸಲು ತೀರ್ಮಾನಿಸಲಾಗಿದೆ ಎಂದರು.

ಜನ್ಮ ಶತಮಾನೋತ್ಸವದ ಅಂಗವಾಗಿ 2015-16 ನೇ ಸಾಲಿಗೆ ವಿಧ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ವ್ಯಾಸಂಗ ವೇತನ, ಬಾಲಕಿಯರ ವಸತಿ ನಿಲಯಗಳ ನಿರ್ಮಾಣ ಇದೇ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವ ಜೊತೆಗೆ ಡಿ. ದೇವರಾಜ ಅರಸು ಅವರ ಹೆಸರಿನಲ್ಲಿ ಅಂಚೆ ಚೀಟಿಯನ್ನು ಬಿಡುಗಡೆ ಮಾಡುವ ಕುರಿತು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಸಚಿವರು ತಿಳಿಸಿದರು.

ಬಾಬು/ಪೂರ್ಣಿಮ/ಕೆಎಂ

# ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು, ಮಾರ್ಚ್ 23, (ಕರ್ನಾಟಕ ವಾರ್ತೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯವು "ಮುಕ್ತ ಸಂಜೀವಿನಿ ವಿದ್ಯಾರ್ಥಿ ವೇತನಕ್ಕೆ" ಸಂಬಂಧಿಸಿದಂತೆ 2013-14 ನೇ ಸಾಲಿನಲ್ಲಿ ಪ್ರಥಮ/ದ್ವಿತೀಯ/ತೃತೀಯ ಬಿಎ/ಬಿಕಾಂ ಹಾಗೂ ಪ್ರಥಮ/ಅಂತಿಮ ವರ್ಷದ ಎಂಎ/ಎಂ.ಕಾಂ/ಸ್ಪೆಷಲ್ ಬಿ.ಎಡ್ ಪದವಿಗಳಿಗೆ ಪ್ರವೇಶಾತಿ ಪಡೆದು ಹಾಗೂ ಏಪ್ರಿಲ್/ಮೇ/ಜೂನ್ 2014 ರ ಮಾಹೆಗಳ ಪರೀಕ್ಷೆಯಲ್ಲಿ ಮೊದಲನೇ ಪ್ರಯತ್ನದಲ್ಲಿ ಎಲ್ಲಾ ವಿಷಯಗಳಲ್ಲಿ ತೇರ್ಗಡೆ ಹೊಂದಿ ಶೇ 50 ಅಥವಾ ಹೆಚ್ಚು ಅಂಕಗಳನ್ನು ಗಳಿಸಿ ಹಾಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾಲಯು ಪ್ರಾದೇಶಿಕ ಕೇಂದ್ರಗಳಲ್ಲಿ ಅಥವಾ ವಿವಿಯ ಅಂತರ್ಜಾಲ www.ksoumysore.edu.in ದಿಂದ ಡೌನ್ ಲೋಡ್ ಮಾಡಿಕೊಂಡು ಭರ್ತಿಮಾಡಿದ ಅರ್ಜಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಉಪಕುಲಸಚಿವರು (ಪ್ರವೇಶಾತಿ) ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು – 06 ಇವರಿಗೆ ದಿನಾಂಕ 13-04-2015 ರೊಳಗಾಗಿ ಕಳುಹಿಸುವಂತೆ ಪ್ರಾದೇಶಿಕ ನಿರ್ದೇಶಕರಾದ ಡಾ. ವಿಜಯ್ ಪ್ರಕಾಶ್ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ವಿವರಗಳಿಗಾಗಿ ಬೆಂಗಳೂರು ಪ್ರಾದೇಶಿಕ ಕೇಂದ್ರ (2), ಕಚೇರಿ ನಂ.58, 1ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಮೈಕೋ ಲೇಔಟ್, ಬಿ.ಟಿ.ಎಂ., 2ನೇ ಹಂತ, ಬೆಂಗಳೂರು – 76, ದೂರವಾಣಿ ಸಂಖ್ಯೆ 080 – 26681320 ಅನ್ನು ಸಂಪರ್ಕಿಸಬಹುದಾಗಿದೆ.

ಬಾಬು:ಜಿಪಿಆರ್.

## ವೈರಮುಡಿ ಉತ್ಸವಕ್ಕೆ ಒಂದು ದಿನದ ಪ್ರವಾಸ

**ಬೆಂಗಳೂರು, ಮಾರ್ಚ್ 23, (ಕರ್ನಾಟಕ ವಾರ್ತೆ**

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಮೇಲುಕೋಟೆಯಲ್ಲಿ ಜರುಗುವ ವೈರಮುಡಿ ಉತ್ಸವಕ್ಕಾಗಿ ಒಂದು ದಿನದ ಪ್ರವಾಸವನ್ನು ಸೂಪರ್ ಡಿಲಕ್ಸ್ ವಾಹನದಲ್ಲಿ ಮಾರ್ಚ್ 30 ರಂದು ಏರ್ಪಡಿಸಿದೆ. ಸದರಿ ಪ್ರವಾಸವು ಬಾದಾಮಿ ಹೌಸ್‌ನಿಂದ ಮಧ್ಯಾಹ್ನ 3–00 ಗಂಟೆಗೆ ಹೊರಟು, ಮರುದಿನ ಬೆಳಿಗ್ಗೆ 6–00 ಗಂಟೆಗೆ ಬೆಂಗಳೂರಿಗೆ ಬರುವಂತೆ ಏರ್ಪಡಿಸಲಾಗಿದೆ.

ಈ ವ್ಯವಸ್ಥಿತ ಪ್ರವಾಸದ ಒಂದು ಆಸನದ ದರ ರೂ 550/– ಆಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ವ್ಯವಸ್ಥಾಪಕರು – (ಸಾ) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ – ಬಾದಾಮಿ ಹೌಸ್, ಮಹಾನಗರ ಪಾಲಿಕೆ ಎದುರು, ದೂರವಾಣಿ ಸಂಖ್ಯೆ: 43344334, 22275869, 8970650070, ಟೂರಿಸಂ ಹೌಸ್ ದೂರವಾಣಿ ಸಂಖ್ಯೆ 43464351, 43464352, ಕೇಂದ್ರ ಕಚೇರಿ ದೂರವಾಣಿ ಸಂಖ್ಯೆ 22352901, 902,903 ಅನ್ನು ಸಂಪರ್ಕಿಸಬಹುದಾಗಿದೆ.

ಬಾಬು:ಜಿಪಿಆರ್.

## ONE DAY TOUR TO VAIRAMUDI FESTIVAL

**Bangalore, March 23 (Karnataka Information)**

**Karnataka State Tourism Development Corportation (KSTDC) is conducting a One day tour Vairamudi Festival at Melkote for the convinience of pilgrims on 30-3-2015 by Super Deluxe bus. Fare is Rs 550/- The rour commences at Badami House on 30-3-2015 at 3.00 PM and will return to Bangalore on 31-03-2015 at 6-00 AM. For the details, please contact : Manager, Badami House, Opp: BBMp-, City Corporation, Phone Nos: 43344334, 22275869, 8970650070. Tourism House Phone Nos : 43464351, 43464352, Head Office Phone No's 22352901, 902 & 903.**

**babu:gpr**

## ಉಚಿತ ತರಬೇತಿಗಾಗಿ ಅರ್ಜಿ ಆಹ್ವಾನ

**ಬೆಂಗಳೂರು, ಮಾರ್ಚ್ 23, (ಕರ್ನಾಟಕ ವಾರ್ತೆ**

ಅಪರೇಟ್ ಟ್ರೈನಿಂಗ್ ಅಂಡ ಡಿಸೈನ್ ಸೆಂಟರ್, ಬೆಂಗಳೂರು ಹಾಗೂ ನ್ಯಾಷನಲ್ ಬ್ಯಾಕ್ವರ್ಡ್ ಕ್ಯಾಸನ್ ಹಾಗೂ ಹಣಕಾಸು ಅಭಿವೃದ್ಧಿ ನಿಗಮ, ನವದೆಹಲಿ ಇವರ ಸಹಭಾಗಿತ್ವದಲ್ಲಿ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಆರು ತಿಂಗಳ ಪ್ರೊಡಕ್ಶನ್ ಸೂಪರ್‌ವೈಸರೀ ಮತ್ತು ಕ್ಯಾಲಿಟೀ ಕಂಟ್ರೋಲ್ ಕೋರ್ಸ್ ( NBCFDC ) ಗಾಗಿ ಅರ್ಜಿ ಆಹ್ವಾನಿಸಿದೆ.

ಅರ್ಜಿ ಸಲ್ಲಿಸಬಯಸುವವರು ಬೆಂಗಳೂರಿನ ನಿವಾಸಿಯಾಗಿರಬೇಕು. 18 ರಿಂದ 35 ವಯೋಮಾನದವರಾಗಿರಬೇಕು. ಆದಾಯ ರೂ 1,03,000/- ಮೀರಿರಬಾರದು. ಎರಡನೇ ಪಿ.ಯು.ಸಿ. ಪಾಸಾಗಿರಬೇಕು. ಮೇಲಿನ ಅರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳು ಅಪರೇಲ್ ಟ್ರೈನಿಂಗ್ ಅಂಡ್ ಡಿಸೈನ್ ಸೆಂಟರ್ – ನಂ 17 ಜಿ 40ನೇ ಮುಖ್ಯ 2 ನೇ ಹಂತ, ಕೈಗಾರಿಕಾ ಉಪನಗರ, ಯುಶವಂತಪುರ, ( near M.E.I. Bus Stop ) ಬೆಂಗಳೂರು – 560 002 ಈ ವಿಳಾಸಕ್ಕೆ ಖುದ್ದಾಗಿ ತೀಳಿಸಲಾದ (ದೃಢೀಕೃತ) ದಾಖಲಾತಿಗಳ 2 ಪ್ರತಿಗಳೊಂದಿಗೆ ಹಾಗೂ ಇತ್ತೀಚಿನ 5 ಭಾವಚಿತ್ರದೊಂದಿಗೆ ದಿನಾಂಕ 30–3–2015 ರೊಳಗೆ ಸಂಪರ್ಕಿಸಿ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ತುಂಬಿ ಅರ್ಜಿ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ 080 – 41283829, 9611238944 ಸಂಪರ್ಕಿಸಬಹುದಾಗಿದೆ.

ಬಾಬು:ಜಿಪಿಆರ್.

## ಇಲಾಖೆ ಹೆಸರು ಬದಲಾವಣೆ

**ಬೆಂಗಳೂರು, ಮಾರ್ಚ್ 23, (ಕರ್ನಾಟಕ ವಾರ್ತೆ**

ರಾಜ್ಯ ಲೆಕ್ಕಪತ್ರ ಇಲಾಖೆಯ ಹೆಸರನ್ನು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ( Karnataka State Audit and Accounts Department) ಎಂದು ಮರು ನಾಮಕರಣ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಬಾಬು:ಜಿಪಿಆರ್.

## ಗರಡಿ ಮನೆ ನಿರ್ಮಾಣಕ್ಕೆ ನೆರವು

**ಬೆಂಗಳೂರು, ಮಾರ್ಚ್ 23, (ಕರ್ನಾಟಕ ವಾರ್ತೆ**

ರಾಜ್ಯದಲ್ಲಿ 2010–11 ನೇ ಸಾಲಿನಿಂದ ಈವರೆಗೆ ಒಟ್ಟು 18 ಗರಡಿ ಮನೆಗಳನ್ನು ನಿರ್ಮಿಸಲಾಗಿದೆ ಹಾಗೂ 34 ಗರಡಿ ಮನೆಗಳ ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ಯೋಜನಾ ಸೇವಾ ಹಾಗೂ ಮೀನುಗಾರಿಕಾ ಸಚಿವ ಶ್ರೀ ಕೆ. ಅಭಯ್‌ಚಂದ್ರ ಅವರು ವಿಧಾನಸಭೆಯಲ್ಲಿ ಇಂದು ಶಾಸಕ ಶ್ರೀ ಕೆ.ಎನ್. ಶಿವಲಿಂಗೇಗೌಡ ಅವರ ಪ್ರಶ್ನೆಗೆ ಲಿಖಿತವಾಗಿ ನೀಡಿದ ಉತ್ತರದಲ್ಲಿ ತಿಳಿಸಿದ್ದಾರೆ.

ಗರಡಿ ಮನೆ ಕಾಮಗಾರಿಗಾಗಿ 2012-13 ನೇ ಸಾಲಿನಲ್ಲಿ 120 ಲಕ್ಷ ರೂ. ಗಳ ಹಾಗೂ 2013-204 ನೇ ಸಾಲಿನಲ್ಲಿ 101.25 ಲಕ್ಷ ರೂ. ಗಳ ಅನುದಾನವನ್ನು ನೀಡಲಾಗಿದೆ ಎಂದು ಅವರು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಬಾಬು:ಜಿಪಿಆರ್.

## ಸ್ವಾಸ್ಥ್ಯ ವಿಮಾ ಯೋಜನೆಯಡಿ
## 49.10 ಲಕ್ಷ ಫಲಾನುಭವಿಗಳಿಗೆ ಸ್ಮಾರ್ಟ್ ಕಾರ್ಡ್

**ಬೆಂಗಳೂರು, ಮಾರ್ಚ್ 23, (ಕರ್ನಾಟಕ ವಾರ್ತೆ**

ರಾಜ್ಯದಲ್ಲಿ ರಾಷ್ಟ್ರೀಯ ಸ್ವಾಸ್ಥ್ಯ ವಿಮಾ ಯೋಜನೆಯಡಿ ಸ್ಮಾರ್ಟ್ ಕಾರ್ಡ್ ನೀಡುವ ಪ್ರಕ್ರಿಯೆಯನ್ನು 2014 ರ ಅಕ್ಟೋಬರ್ 10 ರಿಂದ ಹಂತ ಹಂತವಾಗಿ ಪ್ರಾರಂಭಿಸಲಾಗಿದ್ದು ಇದುವರೆಗೆ 49,10,814 ಫಲಾನುಭವಿ ಕುಟುಂಬಗಳಿಗೆ ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಿಸಲಾಗಿದೆ ಎಂದು ಕಾರ್ಮಿಕ ಖಾತೆಯ ರಾಜ್ಯ ಸಚಿವ ಶ್ರೀ ಪಿ.ಟಿ. ಪರಮೇಶ್ವರ್ ನಾಯ್ಕ್ ಅವರು ಇಂದು ವಿಧಾನಸಭೆಯಲ್ಲಿ ಶಾಸಕ ಸಿ.ಟಿ. ರವಿ ಅವರ ಪ್ರಶ್ನೆಗೆ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಈ ಯೋಜನೆಯಡಿ 2014 ರ ಅಕ್ಟೋಬರ್ 10 ರಿಂದ 2015 ಫೆಬ್ರವರಿ 28 ರವರೆಗೆ 5052 ಫಲಾನುಭವಿಗಳು ನೋಂದಾಯಿತ ಆಸ್ಪತ್ರೆಗಳಲ್ಲಿ ಒಳರೋಗಿಗಳಾಗಿ ಚಿಕಿತ್ಸೆ ಪಡೆದಿದ್ದಾರೆ. ಈ ಯೋಜನೆಯಡಿ ಚಿಕಿತ್ಸೆ ಪಡೆಯಲು ರಾಜ್ಯದಲ್ಲಿ ಒಟ್ಟಾರೆ 557 ಆಸ್ಪತ್ರೆಗಳನ್ನು ಗುರುತಿಸಲಾಗಿದೆ ಎಂದು ತಮ್ಮ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಬಾಬು:ಜಿಪಿಆರ್.

## ಮಾರ್ಚ್ 31 ರೊಳಗೆ ಎಪಿಕ್ ಸಲ್ಲಿಸದ ಅರ್ಜಿ ತಿರಸ್ಕಾರ

**ಬೆಂಗಳೂರು, ಮಾರ್ಚ್ 23, (ಕರ್ನಾಟಕ ವಾರ್ತೆ**

**ಹೊಸದಾಗಿ ಎಪಿಎಲ್ ಮತ್ತು ಬಿಪಿಎಲ್ ಕಾರ್ಡ್‌ಗಳಿಗೆ ಅರ್ಜಿ ಸಲ್ಲಿಸಿರುವ ಅರ್ಜಿದಾರರು ಮಾರ್ಚ್ 31 ರೊಳಗೆ ಚುನಾವಣಾ ಗುರುತಿನ ಚೀಟಿಯ ಪ್ರತಿ (EPIC) ಸಲ್ಲಿಸದಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದೆಂದು, ಆಹಾರ ಸಚಿವರಾದ ದಿನೇಶ್ ಗುಂಡೂರಾವ್ ಅವರು ತಿಳಿಸಿದರು.**

**ವಿಧಾನ ಪರಿಷತ್ತಿನಲ್ಲಿಂದು ಪ್ರಶ್ನೋತ್ತರ ವೇಳೆಯಲ್ಲಿ ಶಾಸಕ ಎಸ್.ವಿ. ಸಂಕನೂರ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು ಪ್ರಸ್ತುತ 1,16,089 ಎಪಿಎಲ್ ಹಾಗೂ 13,23,996 ಬಿಪಿಎಲ್ ಅರ್ಜಿಗಳು ಪರಿಶೀಲನೆ**

ಹಂತದಲ್ಲಿದ್ದು, ಅವುಗಳ ಪೈಕಿ 5,05,340 ಅರ್ಜಿದಾರರು ಮಾತ್ರ ತಮ್ಮ ಕುಟುಂಬದ ಅರ್ಹ ಸದಸ್ಯರ ಎಪಿಕ್ ಸಲ್ಲಿಸಿದ್ದು, ಉಳಿದ ಅರ್ಜಿದಾರರು ತಮ್ಮ ಎಪಿಕ್ ಸಂಖ್ಯೆಯ ಮಾಹಿತಿ ನೀಡಿದಲ್ಲಿ ಅಂತಹ ಅರ್ಜಿಗಳನ್ನು ಸಹ ಆದ್ಯತೆಯ ಮೇಲೆ ವಿಲೆಗೊಳಿಸಲಾಗುವುದು. ಆದರೂ ಮಾರ್ಚ್ 31 ರೊಳಗೆ ಸಲ್ಲಿಸದಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಮೇ ಮಾಹೆಯಲ್ಲಿ ಮತ್ತೆ ಅರ್ಜಿ ಆಹ್ವಾನಿಸಲಾಗುವುದು. ಆಗ ಮತ್ತೆ ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ ಎಂದು ಮಾಹಿತಿ ನೀಡಿದರು.

ಫೆಬ್ರವರಿ ಮಾಹೆಯ ಅಂತ್ಯದವರೆಗೆ 2,09,606 ಎಪಿಎಲ್ ಹಾಗೂ 16,78,264 ಬಿಪಿಎಲ್ ಕಾರ್ಡುಗಳನ್ನು ರಾಜ್ಯಾದ್ಯಂತ ವಿತರಿಸಲಾಗಿದ್ದು, ರಾಜ್ಯದಲ್ಲಿ ಇದುವರೆವಿಗೆ ಎಪಿಎಲ್ ಮತ್ತು ಬಿಪಿಎಲ್‌ಗೆ ಒಟ್ಟು 39,23,607 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು ಅದರಲ್ಲಿ 18,87,870 ಪಡಿತರ ಚೀಟಿಗಳನ್ನು ಈಗಾಗಲೇ ವಿತರಿಸಲಾಗಿದೆ. 14,40,085 ಅರ್ಜಿಗಳನ್ನು ಪರಿಶೀಲನೆಯ ಹಂತದಲ್ಲಿದ್ದು, 2,97,505 ಅರ್ಜಿಗಳು ವಿವಿಧ ಕಾರಣಗಳಿಂದ ತಿರಸ್ಕರಿಸಲ್ಪಟ್ಟಿವೆ. 2,98,147 ಪಡಿತರ ಚೀಟಿಗಳು ವಿತರಣೆಗೆ ಸಿದ್ದಗೊಂಡಿದೆ ಎಂದು ಸಚಿವರು ತಿಳಿಸಿದರು.

ಇಲಾಖೆಯ ಕೆಲಸ ಸ್ವಲ್ಪ ಮಟ್ಟಿಗೆ ನಿಧಾನವಾಗಲು ಖಾಲಿ ಹುದ್ದೆಗಳು ಕಾರಣವಾಗಿದೆ. ಆದ್ದರಿಂದ ಈಗಾಗಲೇ ಇಲಾಖೆಯಲ್ಲಿ ಖಾಲಿ ಇರುವ ವಿವಿಧ 515 ಹುದ್ದೆಗಳನ್ನು ಭರ್ತಿಮಾಡುವ ಸಲುವಾಗಿ ರಾಜ್ಯ ಲೋಕಸೇವಾ ಆಯೋಗವನ್ನು ಕೋರಲಾಗಿದ್ದು, ಅವರು ಇನ್ನು ನಾಲ್ಕು ತಿಂಗಳಲ್ಲಿ ಈ ಎಲ್ಲಾ ಹುದ್ದೆಗಳನ್ನು ಭರ್ತಿಮಾಡುವ ಭರವಸೆ ನೀಡಿದ್ದಾರೆ. ಇಲಾಖೆಯಲ್ಲಿರುವ ವಿವಿಧ ವೃಂದಗಳ 1399 ಹೊಸ ಹುದ್ದೆಗಲನ್ನು ಸೃಜಿಸಲು ಸಹ ಪರಿಶೀಲಿಸಲಾಗುತ್ತಿದೆ ಎಂದು ಸಚಿವರು ತಿಳಿಸಿದರು.

ಬಾಬು:ಪೂರ್ಣಿಮ:ಜಿಪಿಆರ್.

## ಆರು ತಿಂಗಳಲ್ಲಿ ಎಲ್ಲ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ

ಬೆಂಗಳೂರು, ಮಾರ್ಚ್ 23, (ಕರ್ನಾಟಕ ವಾರ್ತೆ

ಪರಿಶಿಷ್ಟ ಜಾತಿ ಮತ್ತು ಪಂಗಡ, ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ನಿಗಮದ ವತಿಯಿಂದ ಕೊರೆಯಲಾಗಿರುವ ಎಲ್ಲಾ ಕೊಳವೆ ಬಾವಿಗಳಿಗೆ ಮುಂದಿನ ಆರು ತಿಂಗಳಲ್ಲಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸುವ ಜೊತೆಗೆ ಪಂಪ್‌ಸೆಟ್‌ಅನ್ನು ವಿತರಿಸಲಾಗುವುದೆಂದು ಸಮಾಜ ಕಲ್ಯಾಣ ಸಚಿವ ಹೆಚ್. ಆಂಜನೇಯ ತಿಳಿಸಿದರು.

ಕಳೆದ ಐದು ವರ್ಷಗಳಿಂದ ಬಾಕಿ ಇದ್ದ 30 ಸಾವಿರ ಕೊಳವೆ ಬಾವಿಗಳಲ್ಲಿ 27 ಸಾವಿರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗಿದ್ದು, ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುವ ಕೊಳವೆ ಬಾವಿಗಳಿಗೆ ಹಂತ ಹಂತವಾಗಿ ಪಂಪ್‌ಸೆಟ್‌ಗಳನ್ನು ನೀಡಲಾಗುತ್ತಿದೆ ಎಂದು ವಿಧಾನ ಪರಿಷತ್ತಿನ ಪ್ರಶ್ನೋತ್ತರ ವೇಳೆಯಲ್ಲಿ ಶಾಸಕ ಸೋಮಣ್ಣ ಮ. ಬೇವಿನಮರದ ಅವರ ಪ್ರಶ್ನೆಗೆ ಉತ್ತರಿಸಿದರು.

ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಕಳೆದ ಐದು ವರ್ಷಗಳಲ್ಲಿ 24183 ಕೊಳವೆ ಬಾವಿಗಳನ್ನು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ 17682 ಹಾಗೂ ಡಿ. ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 12372 ಕೊಳವೆ ಬಾಬಿಗಳನ್ನು ಕೊರೆಯಲಾಗಿದೆ ಎಂದ ಸಚಿವರು ಗಂಗಾ ಕಲ್ಯಾಣ ಯೋಜನೆಯಡಿ 2013–14 ಮತ್ತು 2014–15 ನೇ ಸಾಲಿನಲ್ಲಿ ಕೊಳವೆ ಬಾವಿಗಳನ್ನು ಕೊರೆಯಲು ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್ ಪ್ರಕಟಣೆಗೆ ನ್ಯಾಯಾಲಯವು ಮಧ್ಯಂತರ ತಡೆಯಾಜ್ಞೆ ನೀಡಿರುವುದರಿಂದ, ತಡೆಯಾಜ್ಞೆ ತೆರವುಗೊಂಡ ಕೂಡಲೇ ಬಾಕಿ ಇರುವ ಕೊಳವೆ ಬಾವಿಗಳನ್ನು ಕೊರೆಸಲಾಗುವುದೆಂದು ತಿಳಿಸಿದರು.

ಬಾಬು:ಪೂರ್ಣಿಮ:ಜಿಪಿಆರ್